aglasem.com

FOR KARNATAKA TET EXAM PREPARATION

Karnataka TET 2024 Question Paper

EXAM	YEAR	TYPE
Karnataka TET	2024	Question Paper

KM

Question Booklet Sl. No.

1162038

QUESTION PAPER BOOKLET – PAPER – I

(KANNADA MEDIUM ONLY)

SUBJECTS : Language – I, Language – II, Child Development and Pedagogy, Mathematics and Environmental Studies

Maximum Marks : 150 | **09.30 A.M. to 12.00 P.M.** | **Max. Time : 2.30 Hours**

INSTRUCTIONS TO THE CANDIDATES (Read Carefully)

Note : Candidates are instructed to confirm

- **Whether pre-printed O.M.R. has your name and Application number printed on it.**
- **Whether pre-printed O.M.R. Sheet No. and QP Booklet No. are same. If the candidate uses the O.M.R./ QP booklet which doesn't belong to him/her, such O.M.R. sheets are not considered for evaluation.**
- **Fill and shade the application number in the Sl. Number 11 of the O.M.R. sheet.**

1. The sealed Question Paper Booklet contains 150 questions and O.M.R. Answer Sheet. Verify whether the given Question Paper Booklet is of the same PAPER and MEDIUM as the candidate opted in the application.
2. The Questions are printed in Kannada and English Medium. **But in case of any discrepancies/doubt the question in English Medium is considered as valid**.
3. The Question Paper contains five Parts I, II, III, IV and V consisting of **150** Objective Type Questions, **EACH QUESTION CARRYING ONE MARK**.

Parts	Subjects	Q. No.	Page No.
Part – I	Lang. – I (Kannada, English, Urdu, Tamil, Telugu, Marathi, Hindi, Sanskrit)	1 to 30	2 to 39
Part – II	Lang. – II (Kannada, English, Urdu, Tamil, Telugu, Marathi, Hindi, Sanskrit)	31 to 60	40 to 79
Part – III	Child Development and Pedagogy (Kannada) – III	61 to 90	80 to 84
Part – III	Child Development and Pedagogy (English) – III	61 to 90	85 to 88
Part – IV	Mathematics (Kannada) – IV	91 to 120	89 to 94
Part – IV	Mathematics (English) – IV	91 to 120	95 to 100
Part – V	Environmental Studies (Kannada) – V	121 to 150	101 to 104
Part – V	Environmental Studies (English) – V	121 to 150	105 to 109

4. **Part – I contains 30 Questions for the Language – I and Part – II contains 30 Questions for the Language-II. In this Question Paper Booklet Questions pertaining to all Languages have been given. The Languages being answered must tally with the Languages opted by the candidate in online application.**
5. **Questions related to Part – III : Child Development and Pedagogy (Q. No. 61 to 90), Part – IV : Mathematics (Q. No. 91 to 120) and Part – V : Environmental Studies (Q. No. 121 to 150) are given both in Kannada and English medium in the Question Paper Booklet. The Questions answered must tally with the medium opted in the online application.**
6. **All the entries in the circle must be made with BLUE OR BLACK BALL POINT PEN ONLY. Any alteration in the answer counts as invalid. Usage of whitener/overwriting on OMR Answer Sheet is not permitted and such answer sheet is not considered for evaluation.**
7. Each candidate is given carbonless O.M.R. answer sheet along with the original O.M.R. answer sheet. Candidate should return the **ORIGINAL O.M.R. ANSWER SHEET TO THE ROOM SUPERVISOR** and retain the carbonless copy of the same with the candidate.
8. Calculator, mobile phone and any other electronic devices are not allowed.
9. **If a candidate is found committing malpractice, necessary action will be taken against such candidate as per the examination rules.**

2024

PART – I

ಭಾಷೆ – I

ಕನ್ನಡ

ಸೂಚನೆ : ಈ ಕೆಳಗಿನ ಗದ್ಯ ಭಾಗವನ್ನು ಓದಿ 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿ :

ಎಪ್ಪತ್ತರ ದಶಕದಿಂದೀಚೆಗಿನ ಒಂದು ಬೆಳವಣಿಗೆ ಎಂದರೆ ಹೆಚ್ಚುತ್ತಿರುವ ಕಳೆನಾಶಕಗಳ ಉಪಯೋಗ. ಕೀಟನಾಶಕಗಳಿಗೆ ಹೋಲಿಸಿದಲ್ಲಿ ಇವು ಅಷ್ಟೊಂದು ಅಪಾಯಕಾರಿಗಳಂತೆ ಕಾಣುವುದಿಲ್ಲ. ಕಾರಣ ಇವು ಸ್ವಾಭಾವಿಕವಾಗಿ ವಿಭಜನೆ ಹೊಂದಿ ಕೆಲವೇ ಕೆಲವು ದಿನಗಳಲ್ಲಿ ಸೌಮ್ಯ ರಾಸಾಯನಿಕ ವಸ್ತುಗಳಾಗುತ್ತವೆ. ಆದರೆ ಇವೂ ಸಹ ಇವುಗಳ ತಯಾರಕರು ಹೇಳಿಕೊಳ್ಳುವಷ್ಟು ನಿರಾಪಾಯಕಾರಿಗಳಲ್ಲ. ವಿವೇಚನೆ ಮೀರಿ ಉಪಯೋಗಿಸಿದಲ್ಲಿ ವಿನಾಶ ಕಟ್ಟಿಟ್ಟ ಬುತ್ತಿ ಎಂಬುವುದಕ್ಕೆ ವಿಯೆಟ್ನಾಂ ಯುದ್ಧದಲ್ಲಿ ಆದುದೇ ಸಾಕ್ಷಿ.

ಅಮೆರಿಕ ಹಾಗೂ ವಿಯೆಟ್ನಾಂ ಗೆರಿಲ್ಲಾಗಳ ನಡುವೆ ಘೋರ ಯುದ್ಧ ನಡೆಯುತ್ತಿದ್ದ ಕಾಲ. ಸಂಖ್ಯೆ ಹಾಗೂ ಶಸ್ತ್ರಾಸ್ತ್ರದಲ್ಲಿ ಅಮೆರಿಕಾದ ಸೈನ್ಯಕ್ಕೆ ಸಾಟಿಯಿಲ್ಲದ ವಿಯೆಟ್ನಾಂ ಗೆರಿಲ್ಲಾಗಳಿಗೆ ಇದ್ದ ಒಂದೇ ಅನುಕೂಲ ಎಂದರೆ ಅವರ ಹುಟ್ಟು ದೇಶವಾದ ವಿಯೆಟ್ನಾಂನ ಪೂರ್ಣ ಪರಿಚಯ. ಚಿರಪರಿಚಿತವಾದ ಕಾಡುಮೇಡುಗಳಲ್ಲಿ ಹಗಲಿಡಿ ಅಡಗಿ ಕುಳಿತು ರಾತ್ರಿಯಾಗುತ್ತಿದ್ದಂತೆ ಅವರು ಚಂಗನೆ ಶತ್ರುಗಳ ಮೇಲೆರಗುತ್ತಿದ್ದರು. ನಿತ್ಯಹರಿದ್ವರ್ಣದ ದಟ್ಟ ಅರಣ್ಯಗಳಲ್ಲಿ ಅವರನ್ನು ಹುಡುಕುವುದು ಅಮೆರಿಕಾಕ್ಕೆ ಅಸಾಧ್ಯವಾಯಿತು. ಆಗ ಅವರಿಗೆ ಹೊಳೆದ ಒಂದು ಉಪಾಯ ಎಂದರೆ ಗೆರಿಲ್ಲಾಗಳು ಅಡಗಿ ಕುಳಿತ ಸಾವಿರಾರು ಎಕರೆ ಕಾಡಿಗೆ ಈ ಕಳೆನಾಶಕಗಳನ್ನು ಸುರಿದು ಮರಗಳ ಎಲ್ಲಾ ಎಲೆ ಉದುರುವಂತೆ ಮಾಡುವುದು, ಅನಂತರ ಬಚ್ಚಿಟ್ಟುಕೊಳ್ಳಲಾರದ ಗೆರಿಲ್ಲಾಗಳನ್ನು ಪತ್ತೆಹಚ್ಚಿ ಅತ್ಯಾಧುನಿಕ ಉಪಕರಣಗಳನ್ನು ಬಳಸಿ ನಿರ್ನಾಮ ಮಾಡುವುದು.

ಅದಕ್ಕಾಗಿಯೇ ''ಏಜೆಂಟ್ ಆರೇಂಜ್'' ಎಂಬ ರಾಸಾಯನಿಕವನ್ನು ತಯಾರಿಸಲಾಯಿತು. ಇದು 2, 4, 'ಡಿ' ಮತ್ತು 2, 4, 5, 'ಟಿ'ಯ ಜೊತೆಗೆ ಡೈಆಕ್ಸಿನ್ ಎಂಬ ವಿಷವನ್ನು ಸೇರಿಸಿದ ಮಿಶ್ರಣ. ಅದನ್ನು ಸಾವಿರಾರು ಟನ್‌ಗಟ್ಟಲೆ ತೆಗೆದುಕೊಂಡು ಹೋಗಿ ಹೆಲಿಕಾಪ್ಟರ್‌ಗಳ ಸಹಾಯದಿಂದ ಇಡಿ ಕಾಡಿಗೆ ಸುರಿಯಲಾಯಿತು. ದೈತ್ಯ ಮರಗಳೆಲ್ಲಾ ಎಲೆ ಉದುರಿಸಿಕೊಂಡು, ಮಾನವನ ಕ್ರೌರ್ಯಕ್ಕೆ ಮೂಕಸಾಕ್ಷಿಗಳಾದವು. ಮರೆತಪ್ಪಿದ ಗೆರಿಲ್ಲಾಗಳು ಅಮೆರಿಕನ್ನರ ಗುಂಡಿಗೆ ಬಲಿಯಾದರು. ಇದರಿಂದ ಅಮೆರಿಕ ಗೆಲ್ಲಲಾಗದಿದ್ದರೂ, ಯುದ್ಧ ಸ್ವಲ್ಪ ಕಾಲದಲ್ಲೇ ಮುಕ್ತಾಯಗೊಂಡಿತು.

ಆದರೆ ಆ ರಾಸಾಯನಿಕ ಹುಟ್ಟುಹಾಕಿದ ಆರೋಗ್ಯ ಸಮಸ್ಯೆಗಳು ಮಾತ್ರ ಲೆಕ್ಕವಿಲ್ಲದಷ್ಟು. ಲಕ್ಷಾಂತರ ಕ್ಯಾನ್ಸರ್ ರೋಗಿಗಳು, ಅಂಗವಿಕಲರು, ಶ್ವಾಸಕೋಶದ ರೋಗಿಗಳು ವಿಯೆಟ್ನಾಂನಲ್ಲಿ ಹುಟ್ಟಿಕೊಂಡರು. ಅಮೆರಿಕ ಮಾತ್ರ ಅದಕ್ಕೆ ''ಏಜೆಂಟ್ ಆರೇಂಜ್'' ಕಾರಣವೆಂದು ಒಪ್ಪಿಕೊಳ್ಳಲಿಲ್ಲ, ಆದರೆ ಮೂವತ್ತು ವರ್ಷಗಳ ತರುವಾಯ ಆ ಯುದ್ಧದಲ್ಲಿ ಭಾಗವಹಿಸಿದ್ದ ತನ್ನ ಸೈನಿಕರಲ್ಲೇ ಕ್ಯಾನ್ಸರ್ ರೋಗದ ಚಿಹ್ನೆಗಳು ಕಾಣತೊಡಗಿದವು. ಎಲ್ಲಾ ರೀತಿಯ ರಕ್ಷಾಕವಚಗಳು ಇದ್ದಾಗ್ಯೂ ಸಹ ಅವರ ದೇಹವನ್ನು ಪ್ರವೇಶಿಸಿದ್ದ ''ಏಜೆಂಟ್ ಆರೇಂಜ್'' ಮೂವತ್ತು ವರ್ಷಗಳ ಅನಂತರ ತನ್ನ ಶಕ್ತಿ ಪ್ರದರ್ಶಿಸಲಾರಂಭಿಸಿತು. ವಿಧಿ ಇಲ್ಲದ ಈ ಸೈನಿಕರು ಕಾನೂನಿನ ಮೊರೆ ಹೊಕ್ಕರು. ಈಗ ಅಮೆರಿಕದ ಉನ್ನತ ನ್ಯಾಯಾಲಯ ಇವರೆಲ್ಲರಿಗೂ ಪರಿಹಾರ ಕೊಡಬೇಕೆಂದು ಸರಕಾರಕ್ಕೆ ಆಜ್ಞಾಪಿಸಿದೆ.

aglasem.com For more Question Papers, Sample Papers, Notes & Syllabus visit aglasem.com Page 2 of 27

1. ಅಮೆರಿಕ ಹಾಗೂ ವಿಯೆಟ್ನಾಂ ಗೆರಿಲ್ಲಾ ಯುದ್ಧದಲ್ಲಿ ವಿಯೆಟ್ನಾಂ ಗೆರಿಲ್ಲಾಗಳಿಗೆ ಇದ್ದ ಅನುಕೂಲ

(1) ವಿಯೆಟ್ನಾಂ ಸೈನಿಕರು ಹೊಂದಿದ್ದ ವಿಶಿಷ್ಟ ಶಸ್ತ್ರಾಸ್ತ್ರಗಳು

(2) ವಿಯೆಟ್ನಾಂನಲ್ಲಿದ್ದ ಯುದ್ಧಕ್ಕೆ ಅನುಕೂಲವಾದ ವಾತಾವರಣ

(4) ವಿಯೆಟ್ನಾಂ ಗೆರಿಲ್ಲಾಗಳ ಸಂಖ್ಯೆ

2. 'ಏಜೆಂಟ್ ಆರೇಂಜ್' ಎಂಬುವುದೊಂದು

(2) ಕೀಟನಾಶಕ

(3) ಹೆಲಿಕಾಪ್ಟರ್

(4) ಯುದ್ಧೋಪಕರಣ

3. ಚಿರಪರಿಚಿತವಾದ ಕಾಡುಮೇಡುಗಳಲ್ಲಿ ಹಗಲಿಡೀ ಅಡಗಿ ಕುಳಿತು ರಾತ್ರಿಯ ವೇಳೆ ಶತ್ರುಗಳ ಮೇಲೆ ಎರಗುತ್ತಿದ್ದರು. ಈ ವಾಕ್ಯದಲ್ಲಿ ಗೆರೆ ಎಳೆದ ಪದದ ವ್ಯಾಕರಣಾಂಶ

(1) ದ್ವಿರುಕ್ತಿ

(3) ಅನುಕರಣಾವ್ಯಯ

(4) ಕ್ರಿಯಾರ್ಥಕ ಅವ್ಯಯ

4. ಅಮೆರಿಕ ಮತ್ತು ವಿಯೆಟ್ನಾಂ ಗೆರಿಲ್ಲಾ ಯುದ್ಧದಲ್ಲಿ ಮಾನವನ ಕ್ರೌರ್ಯಕ್ಕೆ ಮೂಕಸಾಕ್ಷಿಯಾದವುಗಳು

(1) ನೋವನ್ನು ಅನುಭವಿಸಿದ ಪ್ರಾಣಿಗಳು

(2) ಮರೆ ತಪ್ಪಿದ ಗೆರಿಲ್ಲಾಗಳು

(4) ವಿಷ ಸೇವಿಸಿದ ಸೈನಿಕರು

5. 'ಏಜೆಂಟ್ ಆರೇಂಜ್' ಹುಟ್ಟುಹಾಕಿದ ಆರೋಗ್ಯ ಸಮಸ್ಯೆ

(2) ಸಕ್ಕರೆ ಕಾಯಿಲೆ

(3) ರಕ್ತಹೀನತೆ

(4) ಹೃದಯ ಸಂಬಂಧೀ ಕಾಯಿಲೆ

6. 'ಏಜೆಂಟ್ ಆರೇಂಜ್'ನಿಂದ ಕಾಡಿನಲ್ಲಾದ ಪರಿಣಾಮ

(1) ಕಾಡುಪ್ರಾಣಿಗಳು ಉಸಿರುಗಟ್ಟಿ ಸತ್ತವು

(2) ಕಾಳ್ಗಿಚ್ಚು ಹರಡಿತು

(3) ಕಾಡಿನಲ್ಲಿ ಬೃಹತ್ ಸ್ಫೋಟವುಂಟಾಯಿತು

7. 'ಲಕ್ಷ್ಮಾಂತರ' ಪದವು ಈ ಸಂಧಿಗೆ ಉದಾಹರಣೆ

(1) ಲೋಪ ಸಂಧಿ

(2) ಗುಣ ಸಂಧಿ

(4) ಯಣ್ ಸಂಧಿ

aglasem.com For more Question Papers, Sample Papers, Notes & Syllabus visit aglasem.com Page 3 of 27

8. ಕೀಟನಾಶಕಗಳಿಗೆ ಹೋಲಿಸಿದರೆ ಕಳೆನಾಶಕಗಳು ಅಷ್ಟೊಂದು ಅಪಾಯಕಾರಿಯಲ್ಲ ಯಾಕೆಂದರೆ

(1) ಸ್ವಾಭಾವಿಕವಾಗಿ ವಿಭಜನೆ ಹೊಂದುವುದಿಲ್ಲ

(2) ಕೃತಕವಾಗಿ ವಿಭಜನೆಗೊಳಿಸಲು ಸಾಧ್ಯ

(3) ಸ್ವಾಭಾವಿಕವಾಗಿ ವಿಭಜನೆ ಹೊಂದಿದರೂ ಸಾಧು ರಾಸಾಯನಿಕವಾಗಿ ಬದಲಾಗದಿರುವುದು

ಸೂಚನೆ : ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು 9 ರಿಂದ 15 ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ :

ಗೌರವಿಸು ಜೀವನವ, ಗೌರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ

ತೃಣಕೆ ಹಸಿರೆಲ್ಲಿಯದು ? ಭೋರಿನದೇ ? ಮಣ್ಣಿನದೇ ? ।
ದ್ರಿನಪನದೆ ? ಚ್ಛೂದ್ರನದೆ ? ನೀರ್ರಿನದೆ ? ನಿನದೆ ? ॥
ತಣಿತಣಿವ ನಿನ್ನ ಕಣ್ಣಿನ ಪುಣ್ಯವೋ ? ನೋಡು ।
ಗುಣಕೆ ಕಾರಣವೊಂದೆ ? – ಮಂಕುತಿಮ್ಮ

ಒಮ್ಮೆ ಹೂದೋಟದಲಿ ಒಮ್ಮೆ ಕೆಳೆಕೂಟದಲಿ
ಒಮ್ಮೆ ಸಂಗೀತದಲಿ ಒಮ್ಮೆ ಶಾಸ್ತ್ರದಲಿ
ಒಮ್ಮೆ ಸಂಸಾರದಲಿ ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗೊ – ಮಂಕುತಿಮ್ಮ

ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ತ್ವ
ಮೃತ್ಯು ನಿನಗಲ್ಪತೆಯೊ – ಮಂಕುತಿಮ್ಮ

9. ತೃಣದ ಹಸಿರಿಗೆ ಕಾರಣ

(3) ಮನ, ಗುಣ, ಕಣ್ಣು, ಬೇರು, ನೀರು

(2) ಬೇರು, ಚಂದ್ರ , ಮನ, ಗುಣ

(4) ಕಣ್ಣು, ಗುಣ, ಮನ, ಮಣ್ಣು

10. ಆತ್ಮೋನ್ನತಿಗೆ ದಾರಿಯಾದುದು

ಆರದೋ ಜಗವೆಂದು ಭೇದವೆಣಿಸದಿರುವುದು

(2) ಚೇತನವನ್ನು ಅಗೌರವಿಸುವುದು

(4) ಜೀವನವನ್ನು ಪ್ರೀತಿಸದಿರುವುದು

aglasem.com For more Question Papers, Sample Papers, Notes & Syllabus visit aglasem.com Page 4 of 27

11. ಕವಿಯ ಪ್ರಕಾರ ಗೌರವಿಸಬೇಕಾಗಿರುವುದು

(1) ಜಗ - ಆತ್ಮ

(2) ಜೀವನ - ಸಮೃದ್ಧಿ

(4) ಹಸಿರು - ಬೇರು

12. 'ವಿಸ್ತಾರ' ಪದದ ತದ್ಭವ ರೂಪ

(1) ವಿಸ್ತರ

(2) ಬಿಸ್ತರ

(3) ಬಿಸ್ತಾರ

13. ಬ್ರಹ್ಮಾನುಭವಿಯಾಗುವುದು ಇಲ್ಲಿ

(1) ಹೂದೋಟದಲಿ, ಕೆಳೆಕೂಟದಲಿ, ಉದ್ಯಾನವನದಲಿ, ಸಂಸಾರದಲಿ

(3) ಮನೆಯಲಿ, ದೇವಾಲಯದಲಿ, ಸರೋವರದಲಿ, ಉದ್ಯಾನವನದಲಿ

(4) ಮೌನದಲಿ, ಮಾತಿನಲಿ, ಜಗಳದಲಿ, ಕೋಪದಲಿ

14. ಕವಿ ಬಾಳಬೇಕೆಂದು ಹೇಳಿರುವುದು

(1) ಮೊಡಕು ಮೂಲೆಗಳಲಿ

(2) ಕತ್ತಲೆಯಲಿ

(3) ಭಾಸ್ಕರನ ಅನುಗ್ರಹದಲಿ

15. 'ತಣಿತಣಿವ ನಿನ್ನ ಕಣ್ಣಿನ ಪುಣ್ಯವೊ' ಈ ವಾಕ್ಯದಲ್ಲಿ ಗೆರೆ ಎಳೆದ ಪದದ ವ್ಯಾಕರಣಾಂಶ

(1) ಜೋಡುನುಡಿ

(3) ಅಂಕಿತನಾಮ

(4) ಕ್ರಿಯಾರ್ಥಕ ಅವ್ಯಯ

16. ಅನ್ವೇಷಣಾ ಮನಸ್ಸು, ಹೊಸತನ ಇದ್ದು ವಿಷಯದ ಬಗ್ಗೆ ಒಳನೋಟದ ಚಿಂತನೆಯೊಂದಿಗೆ ಸೃಜನಶೀಲ ಮನಸ್ಸಿನೊಂದಿಗೆ ಓದುವ ಓದು

(1) ಆತ್ಮ ಸಂತೋಷಕ್ಕಾಗಿ ಓದು

(2) ಸೂಕ್ಷ್ಮವಾಚನ

(3) ವಿಮರ್ಶಾತ್ಮಕ ವಾಚನ

17. ಸಾಕ್ರಟೀಸ್ ಪದ್ಧತಿ ಎಂದು ಕರೆಯಲ್ಪಡುವ ಗದ್ಯ ಬೋಧನಾ ಪದ್ಧತಿ

(2) ಉಪನ್ಯಾಸ ಪದ್ಧತಿ

(3) ಪಠ್ಯಪುಸ್ತಕ ಪದ್ಧತಿ

(4) ಅನುಗಮನ ಪದ್ಧತಿ

aglasem.com For more Question Papers, Sample Papers, Notes & Syllabus visit aglasem.com Page 5 of 27

18. ಆಲಿಸುವಿಕೆ ಕೌಶಲವನ್ನು ಬೆಳೆಸುವ ಒಂದು ಉತ್ತಮ ಚಟುವಟಿಕೆ

(1) ಪ್ರಬಂಧ ಬರೆಸುವುದು

(2) ಚಿತ್ರ ನೋಡಿ ವಿವರಣೆ ಬರೆಯುವುದು

(4) ಭಾಷಣ ಹೇಳಿಸುವುದು

19. ಶಬ್ದ ಸಂಕೇತಗಳನ್ನು ಕಣ್ಣಿನಿಂದ ನೋಡುತ್ತಾ ಅವುಗಳ ಅರ್ಥಗಳನ್ನು ಗ್ರಹಿಸುತ್ತಾ ಸದ್ದಿಲ್ಲದೆ ಮನಸ್ಸಿನಲ್ಲಿ ಓದುವ ಓದು

(1) ಗಟ್ಟಿ ವಾಚನ

(2) ಅರ್ಥಗ್ರಹಿಕೆಯ ಓದು

(3) ಶೀಘ್ರ ವಾಚನ

20. ಘಟಕ ಯೋಜನೆಯ ಒಂದು ಲಕ್ಷಣ

(2) ವಿಷಯದ ಬೋಧನೆ ಬಿಡಿಬಿಡಿಯಾಗಿರುತ್ತದೆ

(3) ಪಾಠದ ಕೊನೆಯಲ್ಲಿ ಮೌಲ್ಯಮಾಪನ ನಡೆಸಲಾಗುವುದು

(4) ವಿಷಯಕ್ಕೆ ಸಂಬಂಧಿಸಿದಂತೆ ತುಂಡುಕಲಿಕೆ ಇರುತ್ತದೆ

21. ತರಗತಿ ಕೋಣೆಯಲ್ಲಿ ಅನಿರೀಕ್ಷಿತ ಸಮಸ್ಯೆಗಳನ್ನು ಎದುರಿಸಲು ಶಿಕ್ಷಕ ತನ್ನ ಪಾಠಯೋಜನೆಯಲ್ಲಿ ಬದಲಾವಣೆಗೆ ಅವಕಾಶ ಕಲ್ಪಿಸುವ ತತ್ವ

(1) ಶಿಥಿಲತೆಯ ತತ್ವ

(2) ಯೋಜನೆಯ ತತ್ವ

(4) ಅಂತರ್‌ಕ್ರಿಯೆ ತತ್ವ

22. 'ಮೈಕ್ರೋ ಫಿಲ್ಮ್' ಈ ಪ್ರಕಾರದ ದೃಶ್ಯಮಾಧ್ಯಮ

(1) ಪ್ರಕ್ಷೇಪಿತ – ಚಲನಶೀಲ

(3) ಪ್ರಕ್ಷೇಪ ಮಾಡಲಾಗದ ಎರಡು ಆಯಾಮಗಳುಳ್ಳದ್ದು

(4) ಶಾಬ್ದಿಕ ಮುದ್ರಿತ

23. ಉದಾಹರಣೆಗಳನ್ನು ಮೊದಲು ನೀಡಿ ನಂತರ ಸೂತ್ರವನ್ನು ನಿರೂಪಿಸುವ ವ್ಯಾಕರಣ ಬೋಧನಾ ವಿಧಾನ

(2) ನಿಗಮನ ಪದ್ಧತಿ

(3) ಸಂಪೂರ್ಣ ಪದ್ಧತಿ

(4) ಸಮನ್ವಯ ಪದ್ಧತಿ

aglasem.com For more Question Papers, Sample Papers, Notes & Syllabus visit aglasem.com Page 6 of 27

24. ಗದ್ಯ ಬೋಧನೆಯು ಈ ಗುರಿಯನ್ನು ಹೊಂದಿಲ್ಲ

(1) ಲಿಖಿತ ಅಭಿವ್ಯಕ್ತಿ ಸ್ವಾತಂತ್ರ್ಯ ಬೆಳೆಸುವುದು

(2) ವಾಕ್ಯರಚನಾ ಸಾಮರ್ಥ್ಯ ಬೆಳೆಸುವುದು

(4) ಓದುಗಾರಿಕೆಯ ಸಾಮರ್ಥ್ಯ ಬೆಳೆಸುವುದು

25. ಬೋಧನಾ ಪದ್ಧತಿಗಳನ್ನು ಅವರ ನಿರೂಪಕರೊಂದಿಗೆ ಹೊಂದಿಸಿ.

a. ಅನುಗಮನ ಪದ್ಧತಿ	1. ಫ್ರಾನ್ಸಿಸ್ ಬೇಕನ್
b. ಯೋಜನಾ ಪದ್ಧತಿ	2. ಫ್ರೆಡರಿಕ್ ಫ್ರೊಬೆಲ್
c. ಕ್ರೀಡಾ ಪದ್ಧತಿ	3. ಜಾನ್ ಡ್ಯೂಯಿ
d. ಕಿಂಡರ್ ಗಾರ್ಟನ್ ಪದ್ಧತಿ	4. ಕಾಲ್ಡ್‌ವೆಲ್ ಕುಕ್

ಆಯ್ಕೆ:

	a	b	c	d
(1)	1	4	2	3
(3)	4	3	1	2
(4)	3	4	1	2

26. 'ಮೂವರು' ಪದವು ಈ ಪ್ರಕಾರದ ನಾಮಪದಕ್ಕೆ ಉದಾಹರಣೆ

(2) ಸಂಖ್ಯಾ ವಾಚಕ

(3) ಪರಿಮಾಣ ವಾಚಕ

(4) ವಸ್ತು ವಾಚಕ

27. 'ಇಂಚರ' ಪದವು ಈ ಸಮಾಸಕ್ಕೆ ಉದಾಹರಣೆ

(1) ತತ್ಪುರುಷ ಸಮಾಸ

(2) ಅಂಶಿ ಸಮಾಸ

(3) ದ್ವಿಗು ಸಮಾಸ

28. 'ಅವನು ನಾಳೆ ಬರುವೆನೆಂದು ಹೇಳಿ ಹೋದನು' ವಾಕ್ಯವು ಈ ವಾಕ್ಯ ಪ್ರಕಾರಕ್ಕೆ ಸೇರಿದೆ

(1) ಸಾಮಾನ್ಯ ವಾಕ್ಯ

(2) ಸಂಯೋಜಿತ ವಾಕ್ಯ

(3) ಸ್ವತಂತ್ರ ವಾಕ್ಯ

29. ನುಡಿಗಟ್ಟಿಗೆ ಉದಾಹರಣೆಯಾದ ಪದ

(2) ಬಟ್ಟಬಯಲು

(3) ಕಸಕಡ್ಡಿ

(4) ಕಾಯಿಕಸರು

30. 'ಈ ಪುಸ್ತಕಕ್ಕೆ ಬೆಲೆ ಹೆಚ್ಚು' ಇಲ್ಲಿ ಗೆರೆ ಎಳೆದ ಪದದ ಕಾರಕಾರ್ಥ

(1) ಅಪಾದಾನ

(2) ಅಧಿಕರಣ

(3) ಸಂಬಂಧ

aglasem.com For more Question Papers, Sample Papers, Notes & Syllabus visit aglasem.com Page 7 of 27

PART – II
Language – II
ENGLISH

Read the passage. Answer the questions from 31 to 38, choosing the most appropriate option.

Balan lives in a village on the edge of a forest in Iddukki district. The place was once haunted by a man-eating leopard. It would visit the village at night and carry away sheep, goats, children and sometimes grown up people.

Balan had another member in his family, the little Amma, his only daughter aged twelve. One day Balan had to go to the next village on some urgent work. He told Amma that he would return before sunset.

But he could not return even by nine. A dim light burned in the house. The wooden door was latched from inside. Suddenly Amma heard some rustling sound from outside. She sensed that it was the dreaded leopard. Amma did not get panicky. The beast began to push at the door as hard as it could. Amma realized that the door would not withstand the onslaught from outside.

She saw a pounding stick in a corner. She leaned it against a beam and climbed up like a monkey. She made herself comfortable on the cross beam.

She heard a bang and the door gave in and the man-eater was inside. It sniffed every where but could not see its prey. Then it looked up and saw Amma sitting on the cross beam. It began to jump. Once it was able to touch her feet. The frustrated beast went out. In a moment she could hear the beast on the thatched roof. It began to scratch and remove the hay on the bamboo frame.

Just at that moment she heard commotion at a distance. She could hear footsteps running away. A few moments later she heard her father call 'Amma'.

Suddenly there was silence. In a moment the silence was broken by a bang. Yes, he had fired a bullet from his gun. It was followed by something rolling down the roof with a thud.

The man-eater was shot. The whole village gathered in front of Balan's house. Balan became a hero. The next morning his photo appeared in the newspapers. At a public function the next evening he was honoured.

Nobody remembered the real heroine Amma!

31. The village where Balan lives is haunted by a

(1) sheep (2) goat (4) child

aglasem.com For more Question Papers, Sample Papers, Notes & Syllabus visit aglasem.com Page 8 of 27

32. The real brave person in the passage is
(1) Balan
(3) A grown up villager
(4) A child from the village

33. Amma made herself comfortable on
(1) a pounding stick
(2) the bamboo frame
(4) the door step

34. The silence was broken by
(1) a thud
(3) the footsteps running away
(4) the rustling sound

35. The word which means, "sudden noisy confusion or excitement" in the passage is
(1) panicky
(3) frustration
(4) dreaded

36. The word from the passage that takes the prefix 'dis' is
(1) heard
(2) comfortable
(4) learn

37. Balan became a hero.
The correct question tag to be used here is
(1) doesn't he ?
(2) did he ?
(3) does he ?

38. The wooden door was latched from inside.
The underlined word is a/an
(1) noun
(3) conjunction
(4) adverb

Read the poem given below and answer the questions from 39 to 45 by choosing the most appropriate option :

I travell'd among unknown Men,
In Lands beyond the Sea;
Nor England! did I know till then
What love I bore to thee.

'Tis past, that melancholy dream!
Nor will I quit thy shore
A second time; for still I seem
To love thee more and more.

aglasem.com For more Question Papers, Sample Papers, Notes & Syllabus visit aglasem.com Page 9 of 27

Among thy mountains did I feel
The joy of my desire;
And She I cherish'd turn'd her wheel
Beside an English fire.

Thy mornings shew'd–thy nights conceal'd
The bowers where Lucy play'd;
And thine is, too, the last green field
Which Lucy's eyes survey'd!

39. The poet had love for his
(1) friends
(3) sea
(4) mountains

40. In this poem we can see that the poet is having a feeling of
(1) happiness
(2) curiosity
(4) love towards nature

41. "To love thee more and more". In this line <u>thee</u> refers to
(2) Lucy
(3) His friends
(4) His dream

42. The phrase 'English fire' means
(3) love for mountains
(4) love for sea

43. The rhyme scheme of the poem is
(2) aa bb
(3) ab cd
(4) ab cb

44. "A second time; for still I seem". The figure of speech used in this line is
(1) simile
(2) metaphor
(4) synecdoche

45. The word in the poem that gives the meaning 'a deep feeling of sadness that lasts for a long time'
(1) conceal
(2) cherished
(4) shrew'd

aglasem.com Free mock Question Papers, Sample Papers, Notes & Syllabus visit aglasem.com Page 10 of 27

Answer the questions from 46 to 50, choosing the most appropriate option following the given directions.

46. He is _____ NCC cadet who won _____ best cadet award.
The correct words to be filled in are
(1) an, a
(2) a, the
(3) the, the

47. The teacher gave _____ about the examination to the students.
The correct word form to be filled in is
(1) informative
(3) informing
(4) inform

48. Everyone loves him.
The correct transformation of the sentence is
(1) He is being loved by everyone.
(2) He was loved by everyone.
(4) He has been loved by everyone.

49. John : Hello Arun, are you going towards the stadium ?
Arun : Yes, I am. Shall I drop you to the stadium ?
The language function of the underlined sentence is :
(1) accepting invitation
(3) enquiry
(4) suggestion

50. Ravi was so happy that he went to theatre to watch a movie with his friends.
The correct infinitive in the above sentence is
(1) was
(2) went
(3) to theatre

Answer the questions from 51 to 60, choosing the most appropriate option.

51. N S Q F stands for
(1) National School Qualification Framework
(3) National Skill Quality Framework
(4) National School Quality Framework

52. Tests used for testing the overall ability to use language at a certain point of time are
(1) Diagnostic Tests
Achievement Tests
(4) Placement Tests

aglasem.com For more Question Papers, Sample Papers, Notes & Syllabus visit aglasem.com Page 11 of 27

53. The words "Yours Sincerely" are the _____ of a letter.
(1) signature
(2) salutation
(3) superscription

54. Asha reads a text looking for specific information. This type of reading is known as
(3) Skimming
(2) Rapid reading
(4) Extensive reading

55. Think – Pair – Share is a teaching strategy in which students work together to solve a problem or answer a question about an assigned reading. This is an example of
(1) Communicative Language Learning
(3) Task Based Language Learning
(4) Activity Based Learning

56. A resource that helps the learner to find out the synonyms and antonyms of words is a/an
(1) encyclopedia
(2) journal
(4) newspaper

57. The method, which comes as a reaction against grammar translation method is
(3) bilingual method
(2) sentence method
(4) play learn method

58. Total physical response activities are useful in developing learner's _____ skill.
(1) writing
(3) reference
(4) reading

59. The activity which facilitates the speaking skill of learner is
(1) dictation
(2) editing
(3) cross-word puzzle

60. There are _____ diphthongs in English.
(1) twelve
(3) ten
(4) twenty

aglasem.com For more Question Papers, Sample Papers, Notes & Syllabus visit aglasem.com Page 12 of 27

KANNADA MEDIUM
PART – III
ಶಿಶು ವಿಕಸನ ಮತ್ತು ಬೋಧನಾಶಾಸ್ತ್ರ

61. ಸೋಪಾದಿತ ಅನುಬಂಧದಲ್ಲಿ ನಾಯಿಗೆ ಆಹಾರವನ್ನು ನೀಡಿದ ತಕ್ಷಣ ಜೊಲ್ಲನ್ನು ಸುರಿಸುತ್ತದೆ. ಇಲ್ಲಿ ಆಹಾರ ಎಂಬುದು

(1) ಸಹಜ ಉದ್ದೀಪನ(NS)

(3) ಸಹಜ ಅನುಕ್ರಿಯೆ(CR)

(4) ಅಸಹಜ ಅನುಕ್ರಿಯೆ(UCR)

62. ಒಂದು ನಿರ್ದಿಷ್ಟ ಪ್ರಮಾಣದ ನೀರು ಉದ್ದನೆಯ ಪಾತ್ರೆಯಲ್ಲಿದ್ದಾಗ ಹೆಚ್ಚಿರುತ್ತದೆ ಮತ್ತು ಅಗಲವಾದ ಪಾತ್ರೆಯಲ್ಲಿದ್ದಾಗ ಕಡಿಮೆ ಇರುತ್ತದೆ ಎಂದು ಮಗು ಭಾವಿಸುತ್ತದೆ. ಪಿಯಾಜೆಯವರ ಪ್ರಕಾರ, ಮಗು ಈ ಹಂತಕ್ಕೆ ಸೇರಿದೆ

(1) ಸಂವೇದನಾ ಗತಿ ಹಂತ

(3) ಮೂರ್ತ ಕಾರ್ಯಗಳ ಹಂತ

(4) ಔಪಚಾರಿಕ ಕಾರ್ಯಗಳ ಹಂತ

63. ಈ ಕೆಳಗಿನವುಗಳಲ್ಲಿ ಮಕ್ಕಳ ಶಾರೀರಿಕ ಅವಶ್ಯಕತೆ

(1) ಗೌರವ (2) ಸ್ವತಂತ್ರ (3) ಸ್ವೀಕಾರ

64. ಈ ಕೆಳಗಿನ ಯಾವುದು ತಾರುಣ್ಯಾವಸ್ಥೆಯ ಲಕ್ಷಣವಲ್ಲ ?

(1) ದೈಹಿಕ ಬದಲಾವಣೆಗಳಿಗೆ ಹೊಂದಾಣಿಕೆಯಾಗಲು ಕಷ್ಟಪಡುವುದು

(2) ಸ್ವ-ಪ್ರಜ್ಞೆ ಹೆಚ್ಚಾಗುವುದು.

(4) ಮಕ್ಕಳ ಮತ್ತು ವಯಸ್ಕರ ಪಾತ್ರಗಳ ನಡುವೆ ಸಿಕ್ಕಿಕೊಳ್ಳುವುದು

65. ಕಾಲಂ 'A' ನ್ನು 'B' ಗೆ ಹೊಂದಿಸಿ.

A	B
i. ಸೂಕ್ಷ್ಮ ಮತ್ತು ಕೋಪ	a. ಜ್ಞಾನಾತ್ಮಕ ವಿಕಾಸ
ii. ದೇಹದ ಮೇಲೆ ಕೂದಲುಗಳ ಬೆಳವಣಿಗೆ	b. ನೈತಿಕ ವಿಕಾಸ
iii. ಕಲ್ಪನಾ ಶಕ್ತಿಯ ಬೆಳವಣಿಗೆ	c. ಭಾವನಾತ್ಮಕ ವಿಕಾಸ
iv. ಮಾನವೀಯತೆ	d. ಭೌತಿಕ ವಿಕಾಸ

(1) i – c, ii – d, iii – b, iv – a

(2) i – b, ii – d, iii – a, iv – c

(4) i – b, ii – d, iii – c, iv – a

aglasem.com For more Question Papers, Sample Papers, Notes & Syllabus visit aglasem.com Page 13 of 27

66. ತಾರುಣ್ಯಾವಸ್ಥೆಯಲ್ಲಿ ಉಂಟಾಗುವ ಸಾಮಾಜಿಕ ಬದಲಾವಣೆ ಯಾವುದು ?

a. ಸಮವಯಸ್ಕರ ಪ್ರಭಾವ ಕಡಿಮೆಯಾಗುವುದು.

b. ಸಾಮಾಜಿಕ ಚಟುವಟಿಕೆಗಳು ಗರಿಷ್ಠ ಮಟ್ಟವನ್ನು ತಲುಪುವುದು.-

c. ಸಮಾನ ಲಿಂಗ ವ್ಯಕ್ತಿಗಳೊಂದಿಗೆ ಮಾತ್ರ ಸ್ನೇಹವನ್ನು ಬಯಸುವುದು.

d. ನಾಯಕನ ಆರಾಧನೆ ಬೆಳೆಸಿಕೊಳ್ಳುವುದು.-

(1) a ಮತ್ತು b

(2) a ಮತ್ತು c

(3) b ಮತ್ತು c

67. ಥಾರನ್‌ಡೈಕ್‌ರವರ ಪ್ರಕಾರ, ಮಗು ಬಹುಮಾನವನ್ನು ಪಡೆದು ಉತ್ಸಾಹದಿಂದ ಕಲಿಯಲು ಪ್ರೇರಣೆಗೊಳ್ಳುವುದು.

(1) ಸಿದ್ಧತಾ ನಿಯಮ

(3) ಉಪಯೋಗಿಸುವ ನಿಯಮ

(4) ಉಪಯೋಗಿಸದ ನಿಯಮ

68. ವ್ಯಕ್ತಿಗಳ ನಡುವೆ ವ್ಯತ್ಯಾಸಗಳಿಗೆ ಕಾರಣವಾಗುವ ಅಂಶಗಳು

(1) ಅನುವಂಶೀಯತೆ ಮತ್ತು ಕುಟುಂಬ

(2) ಪರಿಸರ ಮತ್ತು ಕುಟುಂಬ

(4) ಪರಿಸರ ಮತ್ತು ಶಾಲೆ

69. ಈ ಕೆಳಗಿನ ಯಾವ ಅಂಶ ವೈಯಕ್ತಿಕ ಭಿನ್ನತೆಗಳ ಮನೋವೈಜ್ಞಾನಿಕ ಆಯಾಮಕ್ಕೆ ಸೇರಿದೆ ?

(2) ದೈಹಿಕ ವಯಸ್ಸು

(3) ಆರೋಗ್ಯದ ಸ್ಥಿತಿ

(4) ದೇಹದಾರ್ಢ್ಯತೆ

70. ವೈಯಕ್ತಿಕ ಭಿನ್ನತೆಯ ಸಮಸ್ಯೆಗಳನ್ನು ಪರಿಹರಿಸಲು ಶಿಕ್ಷಕರಿಗೆ ಸಹಾಯಕವಾಗುವ ಸೂಕ್ತವಾದ ತಂತ್ರಗಳು

a. ಸಾಮರ್ಥ್ಯಾಧಾರಿತ ಗುಂಪುಗಳ ರಚನೆ.

b. ತರಗತಿಯ ಗಾತ್ರವನ್ನು ಕಡಿಮೆ ಮಾಡುವುದು.

c. ನಮ್ಯತೆಯಿಲ್ಲದ ಪಠ್ಯಕ್ರಮ.

d. ವೈಯಕ್ತಿಕ ಬೋಧನೆ.

(1) a, b ಮತ್ತು c

(3) a, c ಮತ್ತು d

(4) b, c ಮತ್ತು d

aglasem.com For more Question Papers, Sample Papers, Notes & Syllabus visit aglasem.com Page 14 of 27

71. ತನ್ನ ಸ್ನೇಹಿತನಿಂದ ಹೊಡೆಸಿಕೊಂಡ ಒಬ್ಬ ಹುಡುಗ ಮನೆಗೆ ಹಿಂದಿರುಗಿ ತನ್ನ ತಮ್ಮನನ್ನು ಹೊಡೆಯುತ್ತಾನೆ. ಇಲ್ಲಿ ಹುಡುಗ ಬಳಸಿದ ರಕ್ಷಣಾ ತಂತ್ರ

(1) ಪ್ರತಿಗಮನ (2) ತರ್ಕಸಮ್ಮತವಾಗಿಸುವಿಕೆ

(4) ಪ್ರಕ್ಷೇಪಣೆ

72. 8 ವರ್ಷದ ಮಗು, 10 ವರ್ಷದ ಮಗು ಸಾಮಾನ್ಯವಾಗಿ ಮಾಡುವ ಕೆಲಸಗಳನ್ನು ಮಾಡುತ್ತದೆ. ಹಾಗಾದರೆ, ಇವನ IQ ?

(1) 80 (3) 100 (4) 115

73. ಚಿಕ್ಕ ಚಿಕ್ಕ ವಾಕ್ಯಗಳ ಬಳಕೆಯನ್ನು ಪ್ರಾರಂಭಿಸುವ ಮಗು ಭಾಷೆಯ ಮೂಲಕ ಪರಿಸರವನ್ನು ಅನ್ವೇಷಿಸುವ ಮತ್ತು ನಿಯಂತ್ರಿಸುವುದನ್ನು ಕಲಿಯುವುದು ಈ ಹಂತದಲ್ಲಿ

(1) ಪ್ರಸವ ಪೂರ್ವ ಹಂತ (2) ತಾರುಣ್ಯಾವಸ್ಥೆ

(3) ಪೂರ್ವ ಬಾಲ್ಯಾವಸ್ಥೆ

74. ವ್ಯಕ್ತಿ ಜೀವನದ ಉದ್ದಕ್ಕೂ ಬೆಳೆಯುವ ಮತ್ತು ಬದಲಾವಣೆಗೆ ಒಳಪಡುವ ಪ್ರಕ್ರಿಯೆಯನ್ನು ಹೀಗೆ ಕರೆಯಬಹುದು

(1) ಬೆಳವಣಿಗೆ

(3) ಪರಿಪಕ್ವತೆ (4) ರೂಪಾಂತರ

75. ಈ ಕೆಳಗಿನ ಯಾವ ಸನ್ನಿವೇಶಗಳು ಲಿಂಗತ್ವ ಪಡಿಯಚ್ಚು ವರ್ಗಕ್ಕೆ ಸೇರಿವೆ ?

a. ಗಂಡು ಮತ್ತು ಹೆಣ್ಣಿಗೆ ಕುಟುಂಬದ ಸಂಪತ್ತಿನ ಅಸಮಾನ ವಿತರಣೆ.

b. ಕೇವಲ ಪುರುಷರನ್ನು ಮಾತ್ರ ಆದಾಯದ ಮೂಲವಾಗಿ ನೋಡುವುದು.

c. ಶಾಲೆಯಲ್ಲಿ ಗಂಡು ಮಕ್ಕಳ ಕ್ರೀಡೆಗಳಿಗಿಂತಲೂ ಹೆಣ್ಣುಮಕ್ಕಳ ಕ್ರೀಡೆಗಳಿಗೆ ಕಡಿಮೆ ಪ್ರಾಮುಖ್ಯತೆ ನೀಡುವುದು.

d. ಮಹಿಳೆಯರು ಕೇವಲ ಮನೆಕೆಲಸಗಳಿಗೆ ಮಾತ್ರ ಸೀಮಿತ.

(1) a ಮತ್ತು b (2) b ಮತ್ತು c (3) a ಮತ್ತು c

76. ಅನುಭವಾತ್ಮಕ ಕಲಿಕೆಯ ಹಂತಗಳ ಸರಿಯಾದ ಕ್ರಮ.

(2) ಮೂರ್ತ ಅನುಭವ → ಸಾಮಾನ್ಯೀಕರಣ → ಪ್ರತಿಫಲನ → ಪ್ರಾಯೋಗಿಕ ಕ್ರಿಯೆ

(3) ಪ್ರಾಯೋಗಿಕ ಕ್ರಿಯೆ → ಮೂರ್ತ ಅನುಭವ → ಸಾಮಾನ್ಯೀಕರಣ → ಪ್ರತಿಫಲನ

(4) ಪ್ರಾಯೋಗಿಕ ಕ್ರಿಯೆ → ಮೂರ್ತ ಅನುಭವ → ಪ್ರತಿಫಲನ → ಸಾಮಾನ್ಯೀಕರಣ

aglasem.com For more Question Papers, Sample Papers, Notes & Syllabus visit aglasem.com Page 15 of 27

77. ಭಾವನಾತ್ಮಕ ವಲಯಕ್ಕೆ ಸೇರದ ವರ್ಗ

(1) ಸ್ವೀಕಾ

(2) ಮೌಲ್ಯೀಕರಣ

(3) ಸಂಘಟನೆ

78. ಶ್ರವಣ ದೋಷವುಳ್ಳ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ವಿಶೇಷ ಸಾಧನ

(1) ಬ್ರೈಲ್ ಲಿಪಿ

(2) ಟೇಪ್ ಮತ್ತು ಕ್ಯಾಸೆಟ್ ರೆಕಾರ್ಡರ್

(4) ಮಾತನಾಡುವ ಪುಸ್ತಕಗಳು

79. ಪ್ರತಿಭಾವಂತ ಮಕ್ಕಳಿಗೆ ಎರಡು ಮುಂಬಡ್ತಿಗಳನ್ನು ನೀಡುವ ಕಾರ್ಯಕ್ರಮ

(2) ಸಮೃದ್ಧ ಕಾರ್ಯಕ್ರಮ

(3) ಸಾಮರ್ಥ್ಯಾಧಾರಿತ ಗುಂಪುಗಳು

(4) ಬೇರ್ಪಡಿಸುವಿಕೆ

80. ಈ ಕೆಳಗಿನ ಯಾವುದು ವ್ಯಕ್ತಿತ್ವವನ್ನು ಮಾಪನ ಮಾಡುವ ಪ್ರಕ್ಷೇಪಣಾ ತಂತ್ರವಲ್ಲ

(1) ಪದ ಸಂಘಟನೆ ಪರೀಕ್ಷೆ

(2) ವಾಕ್ಯ ಪೂರ್ಣಗೊಳಿಸುವ ಪರೀಕ್ಷೆ

(3) ವಿಷಯಾಧಾರಿತ ಗ್ರಹಿಕೆ ಪರೀಕ್ಷೆ

81. ಒಂದು ಮಗು ಓದುವಾಗ ಪದಗಳನ್ನು ಬಿಟ್ಟು ಬಿಡುತ್ತಾನೆ ಅಥವಾ ಸೇರಿಸುತ್ತಾನೆ. ಇವನಿಗೆ ಇರಬಹುದಾದ ಕಲಿಕಾ ನ್ಯೂನತೆ

(2) ಡಿಸ್‌ಗ್ರಾಫಿಯಾ

(3) ಡಿಸ್‌ಕ್ಯಾಲ್ಕುಲಿಯಾ

(4) ಡಿಸ್‌ನೋಮಿಯಾ

82. ಇವುಗಳಲ್ಲಿ ನಿರಂಕುಶ ಬೋಧನಾ ವಿಧಾನ ಯಾವುದು ?

(1) ಅನ್ವೇಷಣೆ

(2) ಗುಂಪು ಚರ್ಚೆ

(4) ಯೋಜನೆ

83. ಒಬ್ಬ ವ್ಯಕ್ತಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಅಪರಾಧಿ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಾನೆ. ಇದು ಈ ಕೆಳಗಿನ ಯಾವ ಸನ್ನಿವೇಶದಲ್ಲಿ ಉಂಟಾಗುತ್ತದೆ ?

(2) ಐಡಿ, ಅಹಂಗಿಂತ ಬಲಿಷ್ಠ

(3) ಅಹಂ, ಅತ್ಯಹಮ್‌ಗಿಂತ ಬಲಿಷ್ಠ

(4) ಅತ್ಯಹಂ, ಅಹಂಗಿಂತ ಬಲಿಷ್ಠ

aglasem.com For more Question Papers, Sample Papers, Notes & Syllabus visit aglasem.com Page 16 of 27

84. ಬೋಧನೆಯ ಸಂವಾದಾತ್ಮಕ ಹಂತದಲ್ಲಿ ಕೆಳಗಿನ ಯಾವ ಕಾರ್ಯವನ್ನು ಸಾಧಿಸಲಾಗುತ್ತದೆ.

(1) ಗುರಿಗಳ ಸ್ಪಷ್ಟೀಕರಣ

(2) ಬೋಧನಾಂಶಗಳ ಸರಿಯಾದ ಜೋಡಣೆ

(4) ಬೋಧಿಸುವಾಗ ಬಳಸಬೇಕಾಗಿರುವ ತಂತ್ರಗಳನ್ನು ತೀರ್ಮಾನಿಸುವುದು

85. ಈ ಕೆಳಗಿನ ಯಾವುದು ತಪ್ಪಾದ ಬೋಧನಾ ಸೂತ್ರ ?

(1) ಗೊತ್ತಿರುವುದರಿಂದ ಗೊತ್ತಿಲ್ಲದೆಡೆಗೆ

(3) ಮೂರ್ತದಿಂದ ಅಮೂರ್ತದೆಡೆಗೆ

(4) ವಿಶ್ಲೇಷಣೆಯಿಂದ ಸಂಶ್ಲೇಷಣೆಯೆಡೆಗೆ

86. ಈ ಕೆಳಗಿನವುಗಳಲ್ಲಿ ಯಾವುದು ಮೂರು ಆಯಾಮದ ಬೋಧನೋಪಕರಣ

(2) ಚಿತ್ರಪಟಗಳು

(3) ಮಿಂಚು ಪಟ್ಟಿಗಳು

(4) ನಕ್ಷೆಗಳು

87. ಕೆಳಗಿನ ಯಾವ ಸಾಮರ್ಥ್ಯ "ತಿಳುವಳಿಕೆ" ಉದ್ದೇಶಕ್ಕೆ ಸೇರಿದೆ ?

(1) ಹೂವಿನ ಬಣ್ಣವನ್ನು ಗುರ್ತಿಸುವರು

(3) ಆಮ್ಲಜನಕದ ರಾಸಾಯನಿಕ ಸಂಕೇತವನ್ನು ಸ್ಮರಿಸುವರು

(4) ಬಾವಲಿಯನ್ನು ಪ್ರಾಣಿ ಮತ್ತು ಪಕ್ಷಿಯೂ ಸಹ ಎಂದು ಸಮರ್ಥಿಸುವರು

88. ಪಾಠವನ್ನು ಪರಿಚಯಿಸುವಾಗ ಶಿಕ್ಷಕರು ಮಾಡುವ ಚಟುವಟಿಕೆ

(1) ಸರಳ ಮತ್ತು ಆಸಕ್ತಿದಾಯಕ ಉದಾಹರಣೆಗಳ ಬಳಕೆ

(2) ವಿದ್ಯಾರ್ಥಿಗಳ ಉತ್ತರವನ್ನು ಒಪ್ಪುವುದು

(3) ಬೋಧನೆಯ ವೇಗವನ್ನು ಬದಲಾಯಿಸುವುದು

89. ಕಲಿಕೆಯ ಮನೋಚಾಲನಾ ವಲಯಕ್ಕೆ ಸೇರಿರುವ ಚಟುವಟಿಕೆ

(3) ಕಾರಣ ಕೊಡುವುದು

(2) ವಿವರಿಸುವುದು

(4) ಕಲ್ಪಿಸಿಕೊಳ್ಳುವುದು

90. ಸ್ಥಿರವಾಗಿ ಫಲಿತಾಂಶಗಳನ್ನು ನೀಡುವ ಪರೀಕ್ಷೆ ಹೊಂದಿರುವ ಲಕ್ಷಣ

(1) ಸಮಂಜಸತೆ

(3) ವಸ್ತುನಿಷ್ಠತೆ

(4) ಸ್ವಂತಿಕೆ

aglasem.com For more Question Papers, Sample Papers, Notes & Syllabus visit aglasem.com

KANNADA MEDIUM
PART – IV
ಗಣಿತ

91. $\frac{63}{2^4 \times 5^3}$ ರ ಬೆಲೆಯು

(1) 0.00315 (2) 0.00215 (4) 0.0215

92. $\sqrt[3]{125} + \sqrt[3]{0.008} - \sqrt[3]{0.343}$ ರ ಬೆಲೆಯು

(1) 5.5 (2) 5.9 (4) 4.9

93. $\frac{1}{3}$ ಮತ್ತು $\frac{7}{8}$ ರ ನಡುವಿನ ಭಿನ್ನರಾಶಿಯು

(1) $\frac{1}{4}$ (3) $\frac{11}{12}$ (4) $\frac{23}{24}$

94. ಮೊದಲ ಹತ್ತು ಅವಿಭಾಜ್ಯ ಸಂಖ್ಯೆಗಳ ಮಧ್ಯಾಂಕವು

(1) 10 (2) 11 (4) 17

95. $99\frac{1}{7} + 99\frac{2}{7} + 99\frac{3}{7} + 99\frac{4}{7} + 99\frac{5}{7} + 99\frac{6}{7}$ ರ ಬೆಲೆಯು

(1) 595 (2) 596 (4) 599

96. 12 ಘಂಟೆಗಳು : 8 ದಿನಗಳು ಈ ಅನುಪಾತದ ಸಂಕ್ಷಿಪ್ತ ರೂಪವು

(1) 1 : 8 (2) 1 : 12 (4) 1 : 4

97. b ನ ಶೇಕಡಾ a ರಷ್ಟು 100 ಮತ್ತು c ನ ಶೇಕಡಾ b ರಷ್ಟು 200 ಆದರೆ, a ಮತ್ತು c ಗಳ ನಡುವಿನ ಸಂಬಂಧವು

(2) a = 2c (3) a = c (4) 2a = 3c

SPACE FOR ROUGH WORK

aglasem.com For more Question Papers, Sample Papers, Notes & Syllabus visit aglasem.com Page 18 of 27

98. 30 ನೋಟ್ ಪುಸ್ತಕಗಳ ಮಾರಿದ ಬೆಲೆಯು 25 ನೋಟ್ ಪುಸ್ತಕಗಳ ಅಸಲು ಬೆಲೆಗೆ ಸಮನಾಗಿದ್ದರೆ ಇಲ್ಲಿ ಸಿಗುವ ಶೇಕಡಾ ನಷ್ಟವು

(1) 5 (3) $15\frac{1}{3}$ (4) 20

99. $a + b = 13$ ಮತ್ತು $ab = 12$ ಆದರೆ $(a - b)$ ನ ಬೆಲೆಯು

(1) 121 (2) ± 5 (3) 14

100. $\frac{7a}{5} + \frac{2}{3} = 2$ ಆದಾಗ 'a' ನ ಬೆಲೆಯು

(1) $\frac{15}{7}$ (2) $\frac{40}{21}$ (3) $\frac{21}{20}$

101. $b = \sqrt{4a}$ ಮತ್ತು $\frac{a^{-1} \times c^5}{b^{-2}} = 128$ ಆದಾಗ 'c' ನ ಬೆಲೆಯು

(2) 5 (3) 0 (4) 1

102. ಬಹುಪದೋಕ್ತಿ $(3x^3 + x^2 - ax + 9)$ ಮತ್ತು $(2x^3 + 3x^2 + 3x + a)$ ಗಳನ್ನು $(x - 2)$ ರಿಂದ ಭಾಗಿಸಿದಾಗ ದೊರೆಯುವ ಶೇಷವು ಸಮವಾಗಿದ್ದರೆ 'a' ನ ಬೆಲೆಯು

(1) 0 (3) 3 (4) 2

103. $(x^4 - 81y^4)$ ನ ಎರಡು ಅಪವರ್ತನಗಳು $(x - 3y)$ ಮತ್ತು $(x + 3y)$ ಆದಾಗ ಇನ್ನೊಂದು ಅಪವರ್ತನವು

(1) $(x^2 - y^2)$
(3) $(x + 3y)$ (4) $(x - 3y)$

104. $4a^3 - 9a$ ನ ಎಲ್ಲಾ ಅಪವರ್ತನಗಳು

(1) $(2a + 3), (2a - 3)$
(3) $(2a + 3), (2a + 3)$ (2) $(a - 3), (a^2 + 3a + 9)$

SPACE FOR ROUGH WORK

aglasem.com For more Question Papers, Sample Papers, Notes & Syllabus visit aglasem.com Page 19 of 27

105. ಕೊಟ್ಟಿರುವ ಚಿತ್ರದಲ್ಲಿ AB ಮತ್ತು CD ಸರಳ ರೇಖೆಗಳು 'P' ಬಿಂದುವಿನಲ್ಲಿ ಪರಸ್ಪರ ಛೇದಿಸಿವೆ. $\underline{CPQ} = \underline{90^\circ}$ ಆದರೆ x, y ಮತ್ತು z ನ ಅಳತೆಗಳು



(1) x = 20 y = 30 z = 40

(3) x = 20 y = 50 z = 40

(4) x = 20 y = 30 z = 50

106. ಕೊಟ್ಟಿರುವ ತ್ರಿಭುಜದಲ್ಲಿ 'c' ನ ಅಳತೆಯು



(1) 30° (2) 60° (3) 70°

SPACE FOR ROUGH WORK

107. ಕೊಟ್ಟಿರುವ ಚಿತ್ರದಲ್ಲಿ 'x' ನ ಅಳತೆಯು



(2) 45° (3) 90° (4) 75°

108. ಸಮಾಂತರ ಚತುರ್ಭುಜ ABCD ಯಲ್ಲಿ $\angle A$ ಮತ್ತು $\angle B$ ಗಳ ಕೋನಾರ್ಧಕಗಳು 'P' ಬಿಂದುವಿನಲ್ಲಿ ಸಂಧಿಸಿವೆ. $\angle APB$ ಯ ಅಳತೆ



(1) 60° (3) 180° (4) 120°

109. ಒಂದು ಸಮಾಂತರ ಚತುರ್ಭುಜದ ಎರಡು ಪಾರ್ಶ್ವ ಬಾಹುಗಳ ಅನುಪಾತವು 3 : 5 ಮತ್ತು ಅದರ ಸುತ್ತಳತೆ 80 cm. ಈ ಸಮಾಂತರ ಚತುರ್ಭುಜದ ಎರಡು ಪಾರ್ಶ್ವಬಾಹುಗಳ ಅಳತೆಗಳು ಕ್ರಮವಾಗಿ

(2) 24 cm ಮತ್ತು 40 cm

(3) 30 cm ಮತ್ತು 50 cm (4) 24 cm ಮತ್ತು 56 cm

SPACE FOR ROUGH WORK

aglasem.com For more Question Papers, Sample Papers, Notes & Syllabus visit aglasem.com

110. ಇವುಗಳಲ್ಲಿ ತಪ್ಪಾದ ಹೇಳಿಕೆ

(1) ಎರಡು ವಿಭಿನ್ನ ರೇಖೆಗಳು ಒಂದಕ್ಕಿಂತ ಹೆಚ್ಚು ಸಾಮಾನ್ಯ ಬಿಂದುಗಳನ್ನು ಹೊಂದಿರುವುದಿಲ್ಲ.

(2) ಒಂದು ರೇಖೆಯು ಅಪರಿಮಿತ ಸಂಖ್ಯೆಯ ಬಿಂದುಗಳನ್ನು ತನ್ನ ಮೇಲೆ ಒಳಗೊಂಡಿದೆ.

(4) ಎಲ್ಲಾ ಲಂಬಕೋನಗಳ ಅಳತೆಗಳು ಒಂದಕ್ಕೊಂದು ಸಮನಾಗಿರುತ್ತವೆ.

111. ಕೊಟ್ಟಿರುವ ಚಿತ್ರದಲ್ಲಿ $\angle OAP = 25^\circ$ ಮತ್ತು $\angle OBP = 35^\circ$. $\angle AOB$ ನ ಅಳತೆಯು ('O' ವೃತ್ತಕೇಂದ್ರವಾಗಿದೆ)



(2) 75° (3) 60° (4) 130°

112. ಒಂದು ಆಯತಘನದ ಉದ್ದ, ಅಗಲ ಮತ್ತು ಎತ್ತರಗಳ ಅನುಪಾತವು 4 : 2 : 3 ಮತ್ತು ಅದರ ಘನಫಲವು 1536 cm^3. ಈ ಆಯತಘನದ ಪೂರ್ಣ ಮೇಲ್ಮೈ ವಿಸ್ತೀರ್ಣವು

(1) 416 cm^2 (2) 432 cm^2 (3) 512 cm^2

113. ಒಂದು ಗೋಳದ ಘನಫಲವು 288 π cm^3 ಆದರೆ, ಈ ಗೋಳದ ಮೇಲ್ಮೈ ವಿಸ್ತೀರ್ಣವು

(2) 196 π cm^2 (3) 156 π cm^2 (4) 288 π cm^2

114. ಪ್ರಾಥಮಿಕ ಹಂತದ ಗಣಿತ ಕಲಿಕೆಯಲ್ಲಿ 'ಮಾಡುತ್ತಾ ಕಲಿ' ಪರಿಕಲ್ಪನೆಯು ಪ್ರತಿಪಾದಿಸುವುದು

(1) ವಿದ್ಯಾರ್ಥಿಗಳು ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಬೇಕು

(3) ಕಲಿಕೆಯೆಂಬುದು ಉಪನ್ಯಾಸದ ಮೂಲಕ ಉಂಟಾಗುತ್ತದೆ

(4) ವಿದ್ಯಾರ್ಥಿಗಳು ಮೌಖಿಕ ಕಲಿಕೆಯಲ್ಲಿ ಗಮನಹರಿಸಬೇಕು

SPACE FOR ROUGH WORK

115. ತರಗತಿ ಸಂವಹನದಲ್ಲಿ ಬಾಹ್ಯ ಅಭಿಪ್ರೇರಣೆಗಳನ್ನು ಹತ್ತಿಕ್ಕಲು ಬಳಸಬಹುದಾದ ಸೂಕ್ತವಾದ ಮೌಲ್ಯಮಾಪನದ ವಿಧ

(2) ಸಂಕಲನಾತ್ಮಕ (3) ನೈದಾನಿಕ (4) ಪ್ರಾಯೋಗಿಕತೆ

116. ಈ ಕೆಳಗಿನವುಗಳಲ್ಲಿ ಯಾವುದು ರಚನಾವಾದ ಆಧಾರಿತ ಪ್ರಾಥಮಿಕ ಗಣಿತ ಬೋಧನೆಯ ಲಕ್ಷಣವಲ್ಲ ?

(1) ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿ ಸಕ್ರಿಯ ಪಾಲುದಾರರಾಗಿರುತ್ತಾರೆ

(2) ಕಲಿಕೆ ಎಂಬುದು ವಿದ್ಯಾರ್ಥಿಗಳ ಸನ್ನಿವೇಶಕ್ಕೆ ಸಂಬಂಧಿಸಿದ್ದು

(4) ಜ್ಞಾನವು ಕಲಿಕಾರ್ಥಿಗಳಿಂದಲೇ ಸಂರಚಿತವಾಗುತ್ತದೆ

117. ಪ್ರಾಥಮಿಕ ಹಂತದ ಮಕ್ಕಳಲ್ಲಿ ಗಣಿತೀಯ ಆಲೋಚನೆ ಮತ್ತು ಸಮಸ್ಯೆ ಪರಿಹಾರ ಕೌಶಲ್ಯಗಳನ್ನು ಉತ್ತೇಜಿಸುವ ತಂತ್ರ

(1) ಸೂತ್ರಗಳನ್ನು ಕಂಠಪಾಠ ಮಾಡಿಸುವುದು

(3) ಪಠ್ಯ ಪುಸ್ತಕದ ಉದಾಹರಣೆಗಳನ್ನು ಚಾಚುತಪ್ಪದೆ ಪಾಲಿಸುವುದು

(4) ಪ್ರಕ್ರಿಯಾತ್ಮಕ ಕೌಶಲ್ಯಗಳನ್ನು ಮಾತ್ರ ಕೇಂದ್ರೀಕರಿಸುವುದು

118. ಪ್ರಾಥಮಿಕ ಹಂತದ ಗಣಿತ ಬೋಧನೆಯಲ್ಲಿ ರಚನಾತ್ಮಕವಾದದ ತರಗತಿ ಶಿಕ್ಷಕನ ಪ್ರಥಮ ಪಾತ್ರ

(1) ಉಪನ್ಯಾಸಕ (3) ಮೌಲ್ಯಮಾಪಕ (4) ಶಿಸ್ತುಪಾಲಕ

119. ವಿದ್ಯಾರ್ಥಿಗಳ ಗಣಿತದ ಪರಿಕಲ್ಪನೆಗಳನ್ನು ಅರ್ಥೈಸಿಕೊಂಡಿರುವಿಕೆಯನ್ನು ಮಾಪನ ಮಾಡುವ ಪರಿಣಾಮಕಾರಿ ಮಾರ್ಗ

(1) ಅತಿ ಉದ್ದದ ಮನೆಗೆಲಸದ ಅಭ್ಯಾಸಗಳನ್ನು ನಿಯೋಜಿಸುವುದು

(2) ಮೌಖಿಕ ರಸಪ್ರಶ್ನೆಗಳನ್ನು ಆಯೋಜಿಸುವುದು

ಆದರ್ಶೀಕೃತ/ಪ್ರಾಮಾಣೀಕೃತ ಪರೀಕ್ಷೆಗಳನ್ನು ನಡೆಸುವುದು.

120. ಪ್ರಾಥಮಿಕ ಹಂತದ ಗಣಿತ ಕಲಿಕೆಯಲ್ಲಿ ತನಿಖಾ ಆಧಾರಿತ ಕಲಿಕೆ/ವಿಚಾರಣಾ ಕಲಿಕೆಯು ಪ್ರಾಥಮಿಕವಾಗಿ ಕೇಂದ್ರೀಕರಿಸುವುದು

(1) ತಥ್ಯಗಳು ಮತ್ತು ಅಂಕಿಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು

(2) ಪರಿಕಲ್ಪನೆಗಳನ್ನು ಶಿಕ್ಷಕರು ವಿವರಿಸುವುದು

(4) ಮಾಹಿತಿಗಾಗಿ ಪಠ್ಯಪುಸ್ತಕವನ್ನು ಅವಲಂಬಿಸುವುದು

SPACE FOR ROUGH WORK

KANNADA MEDIUM
PART – V
ಪರಿಸರ ಅಧ್ಯಯನ

121. ಒತ್ತಡದ S.I. ಏಕಮಾನ
(1) ನ್ಯೂಟನ್ (3) ಜೌಲ್ (4) ಡೈನ್

122. ಮಿಂಚು ಉಂಟಾಗಲು ಕಾರಣ
(1) ಭಾರವಾದ ಕಾರ್ಮೋಡಗಳು ಉಂಟಾಗುವುದು
(3) ಸಂಗ್ರಹವಾಗುವ ನೀರಿನ ಕಣಗಳು
(4) ಮೋಡಗಳ ಅನಿಯಮಿತ ಚಲನೆ

123. ಬೆಳಕಿನ ಮೂಲವೊಂದರಿಂದ ಸಮಾಂತರ ಕಿರಣಗಳು ಅನಿಯತ ಸಮತಲದಿಂದ ಪ್ರತಿಫಲನಗೊಂಡಾಗ, ಪ್ರತಿಫಲಿತ ಕಿರಣಗಳು ಸಮಾಂತರವಾಗಿರುವುದಿಲ್ಲ. ಈ ವಿದ್ಯಮಾನವನ್ನು ವಿವರಿಸುವ ಸೂಕ್ತವಾದ ಹೇಳಿಕೆ
(1) ಪ್ರತಿಫಲನದ ನಿಯಮಗಳು ಪಾಲನೆಯಾಗುವುದಿಲ್ಲ
(3) ಪ್ರತಿಫಲನ ಸಮತಲದ ಅನಿಯತ ಮೇಲ್ಮೈನಿಂದಾಗಿ
(4) ಅನಿಯತ ಸಮತಲದಲ್ಲಿ ಪ್ರತಿಫಲನ ಸಾಧ್ಯವಿಲ್ಲ

124. ಶಬ್ದದ ಘೋಷ ಮತ್ತು ಸ್ಥಾಯಿ ಅನುಕ್ರಮವಾಗಿ ಅವಲಂಬಿತವಾಗಿರುವ ಅಂಶಗಳು
(2) ಆವೃತ್ತಿ ಮತ್ತು ಪಾರ
(3) ಪಾರ ಮಾತ್ರ
(4) ಆವೃತ್ತಿ ಮಾತ್ರ

125. ಒಂದು ಸಮತಲ ದರ್ಪಣದ ಮುಂದೆ 5 m ದೂರದಲ್ಲಿ ವಸ್ತುವೊಂದನ್ನು ಇರಿಸಿದೆ, ವಸ್ತುವನ್ನು ದರ್ಪಣದೆಡೆಗೆ 1 m ಸರಿಸಿದರೆ, ವಸ್ತು ಮತ್ತು ಪ್ರತಿಬಿಂಬಗಳ ನಡುವಿನ ಅಂತರ
(2) 10 m (3) 5 m (4) 8 m

126. ಸೌರಮಂಡಲದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಭ್ರಮಿಸುವ ಗ್ರಹಗಳ ಜೋಡಿಯನ್ನು ಗುರುತಿಸಿ.
(2) ಶುಕ್ರ ಮತ್ತು ಗುರು
(3) ಯುರೇನಸ್ ಮತ್ತು ಶನಿ
(4) ಯುರೇನಸ್ ಮತ್ತು ಬುಧ.

127. ನಿಶ್ಚಲ ಸ್ಥಿತಿಯಲ್ಲಿರುವ ಕಾಯವೊಂದು ಆ ಕ್ಷಣದಲ್ಲಿ ಚಲಿಸಲಾರಂಭಿಸಲು ಬೇಕಾದ ಬಲವೇ ಅದರ
(1) ಗತಿಶೀಲ ಘರ್ಷಣೆಯ ಅಳತೆಯಾಗಿರುತ್ತದೆ (2) ಭ್ರಮಣ ಘರ್ಷಣೆಯ ಅಳತೆಯಾಗಿರುತ್ತದೆ
(3) ಜಾರು ಘರ್ಷಣೆಯ ಅಳತೆಯಾಗಿರುತ್ತದೆ

128. ಕೆಳಗಿನವುಗಳಲ್ಲಿ ಸಮರೂಪ ಮಿಶ್ರಣ
(2) ಮರಳು ಮತ್ತು ಉಪ್ಪು
(3) ಸಕ್ಕರೆ ಮತ್ತು ಉಪ್ಪು
(4) ಎಣ್ಣೆಯಲ್ಲಿ ನೀರು

aglasem.com For more Question Papers, Sample Papers, Notes & Syllabus visit aglasem.com Page 24 of 27

129. ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸಲಾಗುವ ಸಮಸ್ಥಾನಿ

(1) ಅಯೋಡಿನ್ (2) ಯುರೇನಿಯಂ (3) ಕಾರ್ಬನ್

130. ಅತಿಸಾರರಿಕ್ತ ನೈಟ್ರಿಕ್ ಆಮ್ಲದೊಂದಿಗೆ ವರ್ತಿಸಿ ಹೈಡ್ರೋಜನ್ ಅನಿಲ ಬಿಡುಗಡೆ ಮಾಡುವ ಲೋಹಗಳು

(1) Na ಮತ್ತು Ca (2) Zn ಮತ್ತು Fe

(4) Fe ಮತ್ತು Na

131. ಉಕ್ಕಿನ ತಂತಿಗಿಂತ ಶಕ್ತಿಶಾಲಿಯಾಗಿರುವ ಸಂಶ್ಲೇಷಿತ ಎಳೆ

(1) ರೇಯಾನ್ (3) ಪಾಲಿಎಸ್ಟರ್ (4) ಅಕ್ರಿಲಿಕ್

132. ಸತ್ತ ಸಸ್ಯವರ್ಗ ಕಲ್ಲಿದ್ದಲಾಗಿ ಪರಿವರ್ತನೆ ಹೊಂದುವ ಪ್ರಕ್ರಿಯೆ

(1) ಆನೋಡೀಕರಣ (2) ಗ್ಯಾಲ್ವನೀಕರಣ

(4) ತಟಸ್ಥೀಕರಣ

133. ನಿರ್ಜಲಕಾರಕ

(2) HCl (3) HNO_3 (4) H_2CO_3

134. ಕ್ಯಾಲೋರಿ ಮೌಲ್ಯದ ಅಂತರಾಷ್ಟ್ರೀಯ ಏಕಮಾನ

(1) J (2) N (4) K

135. ಗೋಧಿಯ ತುಕ್ಕು ರೋಗವನ್ನು ಉಂಟುಮಾಡುವ ಸೂಕ್ಷ್ಮಜೀವಿ

(1) ಬ್ಯಾಕ್ಟೀರಿಯಾ (2) ಪ್ರೋಟೋಜೋವಾ (4) ವೈರಸ್

136. ಸಸ್ಯ ಜೀವಕೋಶಗಳಲ್ಲಿ ಮಾತ್ರ ಕಂಡುಬರುವ ಕಣದಂಗಗಳು

(1) ಕೋಶಪೊರೆ, ಲೈಸೋಸೋಮ್, ಸೆಂಟ್ರಿಯೋಲ್

(3) ಕೋಶಪೊರ, ಕೋಶದ್ರವ್ಯ, ಲೈಸೋಸೋಮ್

(4) ಕೋಶಭಿತ್ತಿ, ಲೈಸೋಸೋಮ್, ಸೆಂಟ್ರಿಯೋಲ್

137. ಪಟ್ಟಿ 'A' ಯಲ್ಲಿ ಕೊಟ್ಟಿರುವ ಗ್ರಂಥಿಗಳನ್ನು ಪಟ್ಟಿ 'B' ಯಲ್ಲಿ ಕೊಟ್ಟಿರುವ ಅವುಗಳು ಸ್ರವಿಸುವ ಹಾರ್ಮೋನುಗಳೊಂದಿಗೆ ಹೊಂದಿಸಿ ಬರೆಯಿರಿ.

A	B
i. ಪಿಟ್ಯೂಟರಿ ಗ್ರಂಥಿ	a. ಟೆಸ್ಟೋಸ್ಟಿರಾನ್
ii. ಮೇದೋಜೀರಕ ಗ್ರಂಥಿ	b. ಬೆಳವಣಿಗೆ ಹಾರ್ಮೋನ್
iii. ವೃಷಣ	c. ಈಸ್ಟ್ರೋಜೆನ್
iv. ಅಂಡಾಶಯ	d. ಇನ್ಸುಲಿನ್

(1) i – c, ii – a, iii – d, iv – b

(3) i – a, ii – b, iii – c, iv – d

(4) i – d, ii – c, iii – b, iv – a

aglasem.com For more Question Papers, Sample Papers, Notes & Syllabus visit aglasem.com Page 25 of 27

138. ಕೆಳಗೆ ಕೊಟ್ಟ ಹೇಳಿಕೆಗಳನ್ನು ಓದಿ ಮತ್ತು ಇವುಗಳಲ್ಲಿ ಸರಿಯಾದ ಹೇಳಿಕೆಗಳನ್ನು ಆಯ್ಕೆ ಮಾಡಿರಿ.

ಹೇಳಿಕೆ - 1 : ರಸಗೊಬ್ಬರಗಳು ಯಾವುದೇ ರೀತಿಯ ಹ್ಯೂಮಸ್ ಅನ್ನು ಮಣ್ಣಿಗೆ ಒದಗಿಸುವುದಿಲ್ಲ.

ಹೇಳಿಕೆ - 2 : ಸಾಪೇಕ್ಷವಾಗಿ ಸಾವಯವ ಗೊಬ್ಬರವು ಸಸ್ಯ ಪೋಷಕಗಳನ್ನು ಕಡಿಮೆ ಪ್ರಮಾಣದಲ್ಲಿ ಹೊಂದಿವೆ.

(1) ಹೇಳಿಕೆ - 1 ಸರಿ ಮತ್ತು ಹೇಳಿಕೆ - 2 ತಪ್ಪು

(2) ಹೇಳಿಕೆ - 1 ಮತ್ತು ಹೇಳಿಕೆ - 2 ತಪ್ಪು

(4) ಹೇಳಿಕೆ - 1 ತಪ್ಪು ಮತ್ತು ಹೇಳಿಕೆ - 2 ಸರಿ

139. ಈ ಕೆಳಗಿನವುಗಳಲ್ಲಿ ಆಂತರಿಕ ನಿಶೇಚನ ಕಂಡುಬರುವ ಜೀವಿಗಳ ಗುಂಪು

(2) ಮಾನವರು, ಮೀನುಗಳು, ಕಪ್ಪೆಗಳು

(3) ಕೋಳಿಗಳು, ಕಪ್ಪೆಗಳು, ಮೀನುಗಳು

(4) ಹಸುಗಳು, ಮೀನುಗಳು, ಮಾನವರು

140. ಅರಣ್ಯನಾಶದಿಂದ

(1) ಕಾರ್ಬನ್ ಡೈ ಆಕ್ಸೈಡ್ ಪ್ರಮಾಣ ವಾತಾವರಣದಲ್ಲಿ ಕಡಿಮೆಯಾಗುತ್ತದೆ

(2) ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ

(4) ಜಾಗತಿಕ ತಾಪ ಕಡಿಮೆಯಾಗುತ್ತದೆ

141. ಮಾನವನ ವಿಸರ್ಜನಾಂಗವ್ಯೂಹದಲ್ಲಿ ಮೂತ್ರ ಹರಿಯುವ ಸರಿಯಾದ ಅನುಕ್ರಮಣಿಕೆ

(1) ಮೂತ್ರಜನಕಾಂಗ → ಯುರಿತ್ರಾ → ಮೂತ್ರನಾಳ → ಮೂತ್ರಕೋಶ

(2) ಮೂತ್ರಜನಕಾಂಗ → ಮೂತ್ರಕೋಶ → ಮೂತ್ರನಾಳ → ಯುರಿತ್ರಾ

(3) ಮೂತ್ರಜನಕಾಂಗ → ಯುರಿತ್ರಾ → ಮೂತ್ರಕೋಶ → ಮೂತ್ರನಾಳ

142. ಸಸ್ಯಾಹಾರಿ ಪ್ರಾಣಿಗಳಲ್ಲಿ ಸೆಲ್ಯುಲೋಸ್ ಜೀರ್ಣವಾಗುವುದು

(2) ಜಠರ, ಅನ್ನನಾಳ

(3) ದೊಡ್ಡಕರುಳು, ಅನ್ನನಾಳ

(4) ಸಣ್ಣಕರುಳು, ಬಾಯಿ

143. ವಿದ್ಯಾರ್ಥಿ, ಬೋಧಕ ಮತ್ತು ಸಂಪನ್ಮೂಲಗಳ ನಡುವಿನ ಅಂತರವನ್ನು ಕಡಿಮೆಮಾಡುವ ಸಾಧನಗಳು

(1) ಪ್ರಶ್ನೆಕೋಠಿ ಮತ್ತು ಕಲಿಕಾ ಸಾಮಗ್ರಿ

(2) ಪುಸ್ತಕ ಮತ್ತು ಪ್ರಯೋಗ ಶಾಲೆ

(4) ಗ್ರಂಥಾಲಯ ಮತ್ತು ಸಿಬ್ಬಂದಿ ಕೊಠಡಿ

aglasem.com For more Question Papers, Sample Papers, Notes & Syllabus visit aglasem.com Page 26 of 27

144. ಕಲಿಕಾರ್ಥಿಯಲ್ಲಿ ಸಮಗ್ರವಾಗಿ ಶೈಕ್ಷಣಿಕ ಮತ್ತು ಸಾಮಾಜಿಕ ಕೌಶಲ್ಯಗಳೆರಡನ್ನೂ ಬೆಳೆಸಲು ಹೆಚ್ಚು ಸೂಕ್ತವಾದ ವಿಧಾನ

(1) ಸಮಸ್ಯಾ ಪರಿಹಾರ ಕಲಿಕಾ ವಿಧಾನ
(2) ವಿಮರ್ಶಾತ್ಮಕ ಚಿಂತನಾ ಕಲಿಕಾ ವಿಧಾನ
(4) ನಿಗಮನ ವಿಧಾನ

145. ಪರಿಕಲ್ಪನಾ ನಕ್ಷೆಯ ಸರಿಯಾದ ಅನುಕ್ರಮಣಿಕೆ

(1) ಪ್ರಸ್ತಾವನಾ ಹಂತ → ಅಮೂರ್ತತೆಯ ಪ್ರಸ್ತುತಿ → ಅನ್ವಯಿಸುವಿಕೆ → ಮುಕ್ತಾಯ
(3) ಅನ್ವಯ → ಅಮೂರ್ತತೆಯ ಪ್ರಸ್ತುತಿ → ಪ್ರಸ್ತಾವನಾ ಹಂತ → ಮುಕ್ತಾಯ
(4) ಅಮೂರ್ತತೆಯ ಪ್ರಸ್ತುತಿ → ಪ್ರಸ್ತಾವನಾ ಹಂತ → ಮುಕ್ತಾಯ → ಅನ್ವಯ

146. ಕಲ್ಪನೆಗಳ ಅನ್ವೇಷಣೆ, ಪ್ರಾಯೋಗಿಕತೆ ಮತ್ತು ವಿಮರ್ಶಾತ್ಮಕ ಚಿಂತನೆಗಳನ್ನು ಉತ್ತೇಜಿಸುವ ವಿಧಾನ (approach)

(1) ಸಮಸ್ಯಾ ಪರಿಹಾರ ಕಲಿಕಾ ವಿಧಾನ
(2) ಶೋಧನಾ ಆಧಾರಿತ ಬೋಧನಾ ಕಲಿಕಾ ವಿಧಾನ
(3) ನಿಗಮನ ವಿಧಾನ
ಅನುಗಮನ ನಿಗಮನ ವಿಧಾನ

147. ಕೆಳಗಿನವುಗಳಲ್ಲಿ ಮೌಲ್ಯಮಾಪನಾ ಸಾಧನ

(1) ಘಟಕ ಪರೀಕ್ಷೆ
(2) ಲಿಖಿತ ಪರೀಕ್ಷೆ
(4) ವೀಕ್ಷಣೆ

148. ತಾರ್ಕಿಕ ಚಿಂತನೆ, ಚರ್ಚೆ, ವಾದ, ವಿಶ್ಲೇಷಣೆಗಳ ಮೂಲಕ ಪಕ್ಷಪಾತ ಹಾಗೂ ಪೂರ್ವಾಗ್ರಹಪೀಡಿತ ದೃಷ್ಟಿಕೋನವನ್ನು ನಿಗ್ರಹಿಸುವ ಮತ್ತು ನಿರ್ದಿಷ್ಟ ರೀತಿಯಲ್ಲಿ ಯೋಚಿಸುವ, ನಿರ್ದಿಷ್ಟ ವರ್ತನಾ ವಿನ್ಯಾಸದ ಮನೋವೃತ್ತಿಯು

(1) ವೈಜ್ಞಾನಿಕ ವೀಕ್ಷಣೆ
(2) ವೈಜ್ಞಾನಿಕ ಗ್ರಹಣಶಕ್ತಿ
(3) ವೈಜ್ಞಾನಿಕ ಮನೋಭಾವ

149. ''ವಿಶ್ಲೇಷಣೆ'' (Analysing) ಈ ಜ್ಞಾನಾತ್ಮಕ ಪ್ರಕ್ರಿಯೆಯ ಉಪವಿಭಾಗಗಳನ್ನು ಒಳಗೊಂಡ ಗುಂಪು

(1) ಸೃಷ್ಟಿಸುವುದು, ಯೋಜಿಸುವುದು, ಉತ್ಪಾದಿಸುವುದು
(3) ಗುರುತಿಸು, ಸ್ಮರಿಸು, ಕಂಡುಹಿಡಿಯುವುದು
(4) ಅರ್ಥವಿವರಣೆ ಮಾಡು, ವರ್ಗೀಕರಿಸು, ಸಾರಾಂಶೀಕರಿಸು

150. ನಿರ್ದಿಷ್ಟಮಾನ ಮತ್ತು ಪ್ರಮಾಣೀಕರಣಗಳನ್ನು ಬೆಳೆಸಿ ಮತ್ತು ಅನ್ವಯಿಸಿ, ಕಲ್ಪನೆಗಳು, ವಸ್ತುಗಳು ಮತ್ತು ವಿಧಾನಗಳ ಮೌಲ್ಯವನ್ನು ನಿರ್ಣಯಿಸುವ ಜ್ಞಾನಾತ್ಮಕ ಪ್ರಕ್ರಿಯೆ

(1) ಅನ್ವಯಿಸು
(2) ಸೃಜಿಸು
(3) ವಿಶ್ಲೇಷಿಸು

aglasem.com For more Question Papers, Sample Papers, Notes & Syllabus visit aglasem.com Page 27 of 27